**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 41/2021
ಪಿಡಬ್ಲು : 1 ಸಿಡಬ್ಲು : 1

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಪ್ರವೀಣ ಫಕೀರಪ್ಪ ಸಜ್ಜನ |
| ತಂದೆಯ ಹೆಸರು | : ಶ್ರೀ ಫಕೀರಪ್ಪ ಸಜ್ಜನ |
| ವಯಸ್ಸು | : 33 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ್ತವ್ಯ | : ರಾಮದುರ್ಗ |
| ದಿನಾಂಕ | : 13-03-2023 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಮ್ಮ ಮನೆಯಲ್ಲಿ ನಾನು ನನ್ನ ಅಣ್ಣ ಚಾಸಾಃ6 ವಿಜಯಕುಮಾರ, ನನ್ನ ತಂದೆ ಚಾಸಾಃ5 ಫಕೀರಪ್ಪ ಹಾಗೂ ತಾಯಿ ವಾಸಿಸುತ್ತೇವೆ. ಚಾಸಾಃ4 ಅಶೋಕ ಸಜ್ಜನ ನನ್ನ ಚಿಕ್ಕಪ್ಪ. ನನಗೆ ಶ್ರೀಮತಿ ವಸುದಾ ವಸಂತ ಜೋಶಿ ಪರಿಚಯ. ಅವರ ಜಮೀನುಗಳು ಸೊಪಡ್ಲ ಗ್ರಾಮದ ಸರ್ವೆ ನಂ.153 ಮತ್ತು 154 ಇರುತ್ತವೆ. ನಾವು ಸದರಿ ಜಮೀನುಗಳನ್ನು ಖರೀದಿಗೆ ತೆಗೆದುಕೊಂಡಿರುತ್ತೇವೆ. ನನಗೆ ಓಬಳಾಪುರದ ಕರಡಿಗುಡ್ಡ ಕುಟುಂಬದವರು ಪರಿಚಯ. ಸದರಿಯವರು ನನ್ನ ತಂದೆ ಹಾಗೂ ಚಿಕ್ಕಪ್ಪನ ಮೇಲೆ ಮೇಲ್ಕಾಣಿಸಿದ ಸರ್ವೆ ನಂ.153 ಹಾಗೂ 154 ಕ್ಕೆ ಸಂಬಂಧಿಸಿದಂತೆ ರಾಮದುರ್ಗ ದಿವಾಣಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಅಸಲು ದಾವೆಗಳ ಸಂಖ್ಯೆ 5/2012 ಮತ್ತು 6/2012 ಆಗಿರುತ್ತವೆ. ಸದರಿ ಪ್ರಕರಣಗಳನ್ನು ನಮ್ಮ ಚಿಕ್ಕಪ್ಪ ಚಾಸಾಃ4 ಅಶೋಕ ಸಜ್ಜನ ಹಾಗೂ ನಾನು ನೋಡಿಕೊಳ್ಳುತ್ತೇವೆ.

2. ನನಗೆ ಆರೋಪಿಗಳಾದ 1 ನೇ ಆರೋಪಿ ಶಂಕರ ಲಮಾಣಿ, 2 ನೇ ಆರೋಪಿ ರುಪಲೆಪ್ಪ ಲಮಾಣಿ, 3 ನೇ ಆರೋಪಿ ಶಿವಾನಂದ ಲಮಾಣಿ, 4 ನೇ ಆರೋಪಿ ರವಿ ಲಮಾಣಿ ಪರಿಚಯ. ಆರೋಪಿತರು ಮೇಲ್ಕಾಣಿಸಿದ ಸರ್ವೆ ನಂ.153 ಮತ್ತು 154 ಕ್ಕೆ ಸಂಬಂಧಿಸಿದಂತೆ ನನ್ನ ತಂದೆ

ಚಾಸಾಃ5 ಫಕೀರಪ್ಪ ಹಾಗೂ ನನ್ನ ಚಿಕ್ಕಪ್ಪ ಚಾಸಾಃ4 ಅಶೋಕ ಅವರ ಮೇಲೆ ದಾವೆಯನ್ನು ಮಾಡಿರುತ್ತಾರೆ. ಸದರಿ ಅಸಲು ದಾವೆ ಸಂಖ್ಯೆ 17/2012 ಆಗಿರುತ್ತದೆ. ಆ ಕಾರಣದಿಂದ ಆರೋಪಿತರ ಹಾಗೂ ನಮ್ಮ ಮಧ್ಯೆ ವೈಮನಸ್ಸು ಇದೆ.

3. ದಿಃ08.01.2018 ರಂದು ಅಸಲು ದಾವಾ ಸಂಖ್ಯೆ 5/2012 ಮತ್ತು 6/2012 ದಿನಾಂಕವಿದ್ದು, ಆ ದಿನ ಸದರಿ ದಾವೆಗೆಂದು ನಾವು ರಾಮದುರ್ಗ ದಿವಾಣಿ ನ್ಯಾಯಾಲಯಕ್ಕೆ ಹೋಗಿದ್ದೆವು. ಸದರಿ ಸಮಯದಲ್ಲಿ ನಾನು ನನ್ನ ಚಿಕ್ಕಪ್ಪ ಚಾಸಾಃ 4 ಅಶೋಕ, ನನ್ನ ತಂದೆ ಫಕೀರಪ್ಪ ಹೊಗಿದ್ದೆವು. ಸದರಿ ದಾವೆಯನ್ನು ದಿವಾಣಿ ನ್ಯಾಯಾಲಯ ಮುಂದೂಡಿದ ಕಾರಣ ನಾವು ನ್ಯಾಯಾಲಯದಿಂದ ಹೊರಗೆ ಬರುತ್ತಿದ್ದೆವು. ನಾವು ನ್ಯಾಯಾಲಯದಿಂದ ರಾಮದುರ್ಗದಲ್ಲಿದ್ದ ಯೂನಿಯನ್ ಬ್ಯಾಂಕ ಹತ್ತಿರ ಬಂದಾಗ 1 ನೇ ಆರೋಪಿ ಶಂಕರ ಲಮಾಣಿ, 3 ನೇ ಆರೋಪಿ ರುಪಲೆಪ್ಪ ಲಮಾಣಿ, 3 ನೇ ಆರೋಪಿ ಶಿವಾನಂದ ಲಮಾಣಿ ಹಾಗೂ 4 ನೇ ಆರೋಪಿ ರವಿ ಲಮಾಣಿ ನಮ್ಮ ಮುಂದೆ ಬಂದು ನಮಗೆ ಅಕ್ರಮವಾಗಿ ಅಡ್ಡಗಟ್ಟಿದರು. 1 ನೇ ಆರೋಪಿ ಶಂಕರ ಲಮಾಣಿ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡರು. 4 ನೇ ಆರೋಪಿ ರವಿ ಲಮಾಣಿ ನನ್ನ ಕೈ ಹಿಡಿದ. 3 ನೇ ಆರೋಪಿ ಶಿವಾನಂದ ಲಮಾಣಿ ನನ್ನ ಜೇಬಿನಲ್ಲಿದ್ದ ಸ್ಯಾಮಸಂಗ ಮೊಬೈಲನ್ನು ತಾನೇ ಕಿತ್ತುಕೊಂಡ. ನಮಗೆ ದಾವೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಬೆದರಿಕೆ ಹಾಕಿದರು. ನಂತರ 3 ನೇ ಆರೋಪಿ ಶಿವಾನಂದ ಲಮಾಣಿ ಇವರು 1 ನೇ ಆರೋಪಿ ಶಂಕರ ಲಮಾಣಿ ಇವರ ಫೋಟೋವನ್ನು ನನ್ನ ಮೊಬೈಲನಿಂದ ತೆಗೆದು 3 ನೇ ಆರೋಪಿ ಶಿವಾನಂದ ಲಮಾಣಿ ನನ್ನ ಮೇಲೆ ಜಾತಿ ದೌರ್ಜನ್ಯ ಪ್ರಕರಣವನ್ನು ಮಾಡುತ್ತೇನೆ ಎಂದು ಹೇಳಿದರು. ನಂತರ "ಹೊಲಸು ಸೂಳೆ ಮಕ್ಕಳೆ ಬಹಳ ಆಗಿದೆ" ಎಂದು 3 ನೇ ಆರೋಪಿ ಶಿವಾನಂದ ಲಮಾಣಿ ನಮಗೆ ಬೈದರು. 4 ನೇ ಆರೋಪಿ ರವಿ ಲಮಾಣಿ ನನಗೆ ಕೈಯಿಂದ ಬೆನ್ನಿಗೆ ಹೊಡದು ನನ್ನನ್ನು ಕೆಳಗೆ ಕೆಡವಿದ. 1 ನೇ ಆರೋಪಿ ಶಂಕರ ಲಮಾಣಿ ನನ್ನ ಎದೆಗೆ ಒದ್ದು, ನನ್ನನ್ನು ಹೊಡೆಬಡೆ ಮಾಡಿದರು. ಚಾಸಾಃ4 ಅಶೋಕ ಮತ್ತು ಚಾಸಾಃ7 ಮಹಬೂಬಸಾಬ ಬಂದು ನನ್ನನ್ನು ಬಿಡಿಸಿಕೊಂಡರು. ಎಲ್ಲಾ ಆರೋಪಿತರು ಸೇರಿ ನನಗೆ ಜಾತಿನಿಂದನೆ ಪ್ರಕರಣವನ್ನು ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕಿದರು. ಈ ಘಟನೆ ನಡೆದಾಗ ಬೆಳಿಗ್ಗೆ

11.15 ಗಂಟೆ ಆಗಿತ್ತು. ನನಗೆ ಘಟನೆಯಿಂದ ತೊಂದರೆಯಾದ ಕಾರಣ ಮನೆಗೆ ಹೋಗಿ ನಾನು ಮಲಗಿಕೊಂಡೆ. ನಾನು ನನ್ನ ತಂದೆ ಚಾಸಾಃ5 ಫಕೀರಪ್ಪ ಹಾಗೂ ನನ್ನ ಚಿಕ್ಕಪ್ಪ ಚಾಸಾಃ4 ಅಶೋಕ ಇವರ ಜೊತೆ ಚರ್ಚೆ ಮಾಡಿ, ಮಾರನೆ ದಿನ ರಾಮದುರ್ಗ ಪೋಲೀಸ ಠಾಣೆಯಲ್ಲಿ ದೂರನ್ನು ಸಲ್ಲಿಸಿದೆ. ನಾನು ಈಗ ಸದರಿ ದೂರನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 ಎ ಎಂದು ಗುರುತಿಸಲಾಯಿತು.

4. ದಿಃ08.01.2018 ರಂದು ನನ್ನ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು, ಅವರನ್ನು ಗುರುತಿಸುತ್ತೇನೆ. 3 ಮತ್ತು 4 ನೇ ಆರೋಪಿಗಳು ಗೈರು ಹಾಜರಾಗಿದ್ದು, ಸದರಿ ಆರೋಪಿತರ ಗುರುತನ್ನು ಅಲ್ಲಗಳೆಯುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ.

5. ನಾನು ಘಟನೆಯ ಸಂದರ್ಭದಲ್ಲಿ ನನಗೆ ಆದ ಒಳಪೆಟ್ಟುಗಳಿಗೆ ಮನೆಯಲ್ಲೇ ಚಿಕಿತ್ಸೆ ಪಡೆದಿರುತ್ತೇನೆ. ಪೊಲೀಸರು ಈ ಪ್ರಕರಣದಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯು ತಮಗೆ ಆರೋಗ್ಯ ಸರಿ ಇಲ್ಲದ ಕಾರಣ ಪ್ರಕರಣವನ್ನು ಮುಂದೂಡಲು ಕೋರಿಕೊಂಡ ಕಾರಣ ಸದರಿಯವರ ಪ್ರಾರ್ಥನೆಯನ್ನು ಪರಿಗಣಿಸಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.